(೧) ಹೆಂಚಿನ ಉದ್ಯಮಕ್ಕೆ ರಾಜ್ಯ ಸರ್ಕಾರದ ನೆರವಿನ ಬಗ್ಗೆ

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯ ಸರಕಾರಗಳು ಹೊಸ ಹೆಂಚಿನ ಉದ್ದಿಮೆಗಳಿಗೆ ವಿಶೇಷ ರಿಯಾಯಿತಿ, ಸಹಾಯ ಧನ ತೆರಿಗೆ ವಿನಾಯಿತಿ ಕಡಿಮೆ ವೆಚ್ಚದ ಇಂದನ ಪೂರೈಕೆ ಮಾಡಿದ ಕಾರಣದಿಂದಾಗಿ, ಆ ರಾಜ್ಯಗಳಲ್ಲಿ ತೀರ ಕಡಿಮೆ ಬೆಲೆಯಲ್ಲಿ ಹೆಚ್ಚು ಉತ್ಪಾದನೆ ಆಗುತ್ತಿದೆ. ಆದರಿಂದಾಗಿ ಈ ತನಕ ಮಾರಲ್ಪಡುತ್ತಿದ್ದ ಕರ್ನಾಟಕದ ಹೆಂಚಿಗೆ ಆ ರಾಜ್ಯಗಳಲ್ಲಿ ಬೇಡಿಕೆ ಇಲ್ಲವಾಗುತ್ತ ಬಂದಿದೆ, ಕಾರಣ, ಕರ್ನಾಟಕದ ಹೆಂಚಿನ ಉತ್ಪಾದನಾ ಬೆಲೆ ಅಧಿಕ, ಸಾಗಾಟ ವೆಚ್ಚವೂ ಜಾಸ್ತಿ. ಈ ಸಂದರ್ಭದಲ್ಲಿ ರಾಜ್ಯ ಸರಕಾರ ಹೆಂಚಿನ ಉದ್ದಿಮೆಗೆ ನೆರವು ನೀಡದಿದ್ದರೆ ಉದ್ದಿಮೆ ಮುಚ್ಚುವ ಹಂತಕ್ಕೆ ಬರುತ್ತದೆ. ಪರಿಣಾಮ ಲಕ್ಷಾಂತರ ಮಂದಿ ಕಾರ್ಮಿಕರು, ಸಾಗಾಟಗಾರರು ನಿರ್ಮಾಣ ಕೆಲಸಗಾರರು ಉದ್ಯೋಗ ರಹಿತರಾಗುವ ಸನ್ನಿವೇಶ ಬರುತ್ತದೆ. ಉತ್ಪಾದನಾ ವೆಚ್ಚ ಕಡಿತಗೊಳಿಸಲು ಸರಕಾರ ಕಡಿಮೆ ಬೆಲೆಯಲ್ಲಿ ಹೆಂಚಿನ ಉದ್ದಿಮೆಗೆ ಕಟ್ಟಿಗೆ ಒದಗಿಸಬೇಕು. ಉತ್ತರ ಕನ್ನಡದ ಕಿರುವತ್ತಿ, ಮುಂಡುಗೋಡು ಡಿಪೋಗಳಿಂದ ಅರಣ್ಯ ಇಲಾಖೆ ಕ್ಯೂಬಿಕ್ ಮೀಟರಿಗೆ ರೂಪಾಯಿ ನೂರಕ್ಕೂ ಕಡಿಮೆ ದರದಲ್ಲಿ ಮೈಸೂರು ಪೇಪರ್ ಮಿಲ್ಸ್‌ಗೆ ನೀಡುತ್ತಿದೆ. ಹೆಂಚಿನ ಉದ್ದಿಮೆದಾರರು ಕಟ್ಟಿಗೆ ಬೇಕಾದಲ್ಲಿ ಹೆಚ್ಚಿಗೆ ದರದಲ್ಲಿ ಹರಾಜಿಗೆ ನಿಲ್ಲಬೇಕಾಗಿದೆ. ಸರಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ದೊರೆಯುವ ರಿಯಾಯಿತಿ ಜನತೆಯ ಪಾಲುದಾರಿಕೆಯ ಕಾರ್ಮಿಕ ಪ್ರಧಾನವಾದ ಹಾಗೂ ಕೈಮಡೆ ಸಹಕಾರಿ ರಂಗದ ಮೂಲಕ ಜರುಗುವ ಹೆಂಚಿನ ಉದ್ದಿಮೆಗೂ ದೊರಕಬೇಕು, ಎಂ.ಪಿ.ಎಂ.ಗೆ ನೀಡಿದಂತೆ ಕಡಿಮೆ ಬೆಲೆಯಲ್ಲಿ ಕಟ್ಟಿಗೆ ಒದಗಿಸಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ನಾನು ಉತ್ತರವನ್ನು ತರಿಸಿ ಕೊಡುತ್ತೇನೆ

(೨) ಜಮಖಂಡಿ ತಾಲ್ಲೂಕಿನ ಆಲಬಾಳ ಗ್ರಾಮದಲ್ಲಿ ಹರಿಜನರ ೩೩ ಗುಡಿಸಲುಗಳು ಭಸ್ಮವಾಗಿದ್ದು ಪರಿಹಾರಕ್ಕೆ ಒತ್ತಾಯ

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಮಾನ್ಯ ಅಧ್ಯಕ್ಷರೇ, ಜಮಖಂಡಿ ತಾಲ್ಲೂಕಿನ ಆಲಬಾಳ ಗ್ರಾಮದಲ್ಲಿ ದಿನಾಂಕ ೫-೪-೧೯೮೮ ರಂದು ಭಯಂಕರ ಅಗ್ನಿಪ್ರಕೋಪ ಉಂಟಾಗಿ ಅಲ್ಲಿಯ ಬಡ ಜನರಿಗೆ ಸೇರಿದ ಸುಮಾರು ೩೩ ಗುಡಿಸಲುಗಳು ಸುಟ್ಟು ಹೋಗಿವೆ. ಬೆಂಕಿ ಕಾಣಿಸಿಕೊಂಡು ಕೂಡಲೇ ಗ್ರಾಮಸ್ಥರು ಮತ್ತು ಜಮಖಂಡಿಯಿಂದ ಬಂದು ಅಗ್ನಿಶಾಮಕದವರು ಕೂಡಿಕೊಂಡು ಬೆಂಕಿಯನ್ನು ನಂದಿಸಲು ಪ್ರಯತ್ನಗಳನ್ನು ಮಾಡಿದರೂ ೩೩ ಗುಡಿಸಲುಗಳು ಸುಟ್ಟು ಭಸ್ಮವಾಗಿದೆ. ಸುದೈವದಿಂದ ಯಾರಿಗೂ ಪ್ರಾಣಹಾನಿಯಾಗಿಲ್ಲ. ಎಲ್ಲಾ ಗುಡಿಸಲುಗಳಲ್ಲಿದ್ದ ಪಾತ್ರೆ ಪಡಗ, ಆಹಾರ ಧಾನ್ಯ, ಬಟ್ಟೆ ಬರೆಗಳು ಸಂಪೂರ್ಣ ಸುಟ್ಟು ಹೋಗಿದ್ದು ಅನೇಕ ಜಾನುವೆಗಳು ಸುಟ್ಟು ಹೋಗಿವೆ. ಆಗಿರುವ ಹಾನಿಯ ಒಟ್ಟು ಅಂದಾಜು ಎರಡೂವರೆ ಲಕ್ಷಗಳಿಗೆ ಮಿಕ್ಕಿರುತ್ತವೆ. ಸುದ್ದಿ ತಿಳಿದ ನಂತರ ಕಂದಾಯ ಅಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳು ಬಂದು ನಿಯಮಗಳ ಪ್ರಕಾರ ಪಂಚನಾಮೆ ಮಾಡಿಕೊಂಡು ಹೋಗಿದ್ದಾರೆ. ಜಿಲ್ಲಾ ಪರಿಷತ್ ಮತ್ತು ತಾಲ್ಲೂಕು ಪಂಚಾಯತ್ ಅಧ್ಯಕ್ಷರೂ ಸಹ ಸ್ಥಳಕ್ಕೆ ಬೇಟಿ ನೀಡಿ ದುರಂತವನ್ನು ಕಣ್ಣಾರೆ ಕಂಡಿದ್ದಾರೆ. ಹರಿಜನರು ಬೀದಿ ಪಾಲಾಗಿದ್ದಾರೆ. ಜಿಲ್ಲೆಯ ಉಸ್ತುವಾರಿ ಸಚಿವರು ಹರಿಜನ ಕೋಮಿಗೆ ಸೇರಿದ ಮಂತ್ರಿಗಳು ಆಗಿ ಅಲ್ಲಿಗೆ ಭೇಟಿ ಕೊಡುವ ಸೌಜನ್ಯವನ್ನು ತೋರಿಸಿಲ್ಲ. ಸಂಪೂರ್ಣವಾಗಿ ನಿರಾಧಾರಿಗಳಾದ ಈ ಹರಿಜನರೆಲ್ಲಾ ಅಂದಿನಿಂದ ಇಂದಿನವರೆಗೆ ಸ್ಥಳೀಯ ಶಾಲೆಯ ಆವರಣದಲ್ಲೇ ಠಾಣೆ ಹೂಡಿದ್ದಾರೆ. ಪರಿಹಾರ ಧನ ಹಾಗೂ ಆಶ್ರಯವಿಲ್ಲದೆ ಆಲಬಾಳ ನರಿಗೆ ಈ ಕೂಡಲೇ ಎಲ್ಲಾ ತರಹದ ಪರಿಹಾರ ಧನವನ್ನು ಒದಗಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆಯ ಸಚಿವರು, ಕೆಂದಾಯ ಸಚಿವರ ಪರವಾಗಿ). — ವಿಧಾನ ಸಭಾ ಸದಸ್ಯರಾದ ಶ್ರೀ ಬಾಬುರೆಡ್ಡಿ ವಿ. ತುಂಗಳ್ ಇವರು ನಿಯಮಾವಳಿ ಪಿಸಿಳರ ಅಡಿ ಪ್ರಸ್ತಾಪಿಸಲು ಸೂಚಿಸಿರುವ ವಿಷಯ ಕುರಿತಂ, ಮಾನ್ಯ ಕಂದಾಯ, ಯೋಜನಾ ಹಾಗೂ ನೀರಾವರೀ ಸಚಿವರು ನೀಡಿದ ಹೇಳಿಕೆ.

ದಿನಾಂಕ ೫–೪–೧೯೮೮ ರಂದು ಜಮಖಂಡಿ ತಾಲ್ಲೂಕು ಅಲಬಾಳ ಗ್ರಾಮದಲ್ಲಿ ಆಕಸ್ಮಿಕ ಅಗ್ನಿ ಉಂಟಾಗಿ ೩೩ ಗುಡಿಸಲುಗಳು ಸುಟ್ಟು ಹೋಗಿರುವುದು ಸರಿಯಷ್ಟೆ. ಈ ತರಹ ಪ್ರಕೃತಿ ವಿಕೋಪಗಳಲ್ಲಿ ನೊಂದ ಸಂತ್ರಸ್ಥರಿಗೆ ನೀಡುವ ಪರಿಹಾರ.

೧) ನಗದು ಪರಿಹಾರ ... ಗರಿಷ್ಟ ರೂಪಾಯಿ ೧೨೦೦,೦೦

೨) ಕಟ್ಟಡ ಸಾಮಗ್ರಿಗಳ ರೂಪದಲ್ಲಿ ... ಗರಿಷ್ಟ ರೂಪಾಯಿ ೧೦೦೦,೦೦

ಈ ರೀತಿ ಪರಿಹಾರ ನೀಡಲು ಸರಕಾರವು ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಹಣ ಬಿಡುಗಡೆ ಮಾಡಿದೆ. ಜಿಲ್ಲಾಧಿಕಾರಿ, ಬಿಜಾಪುರ ಇವರು ತಮ್ಮ ಆದೇಶ ದಿನಾಂಕ ೨೮–೫–೧೯೮೮ ರಂದು ತಹಶೀಲ್ದಾರ್ ಜಮಖಂಡಿ, ಇವರಿಗೆ, ರೂ. ೩೦,೦೦೦ ಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತಾರೆ. ಜಿಲ್ಲಾಧಿಕಾರಿಗಳು ಒದಗಿಸಿರುವ ಮಾಹಿತಿ ಮತ್ತು ನೀಡಿರುವ ಆಶ್ವಾಸನೆ ಪ್ರಕಾರ ದಿನಾಂಕ ೫–೪–೧೯೮೮ ರಂದು ಜಮಖಂಡಿ ತಾಲ್ಲೂಕು ಅಲಬಾಳ ಗ್ರಾಮದಲ್ಲಿ ಉಂಟಾದ ಆಕಸ್ಮಿಕ ಅಗ್ನಿ ಅನಾಹುತದಲ್ಲಿ ನೊಂದ ಅರ್ಹ ಸಂತ್ರಸ್ಥರಿಗೆಲ್ಲಾ ನಿಯಮಗಳಂತೆ ನೀಡಬಹುದಾದ ಪರಿಹಾರವನ್ನು ತಕ್ಷಣ ವಿತರಣೆ ಮಾಡುವ ವ್ಯವಸ್ಥೆ ಮಾಡಿದ್ದಾರೆ. ಈ ರೀತಿ ಪರಿಹಾರ ಪಡೆದ ಸಂತ್ರಸ್ಥರು ತಮ್ಮ ಗುಡಿಸಲುಗಳನ್ನು ದುರಸ್ತಿ ಪಡಿಸಿಕೊಂಡು ಪುನರ್ ನಿರ್ಮಿಸಿಕೊಂಡು ಅವರವರ ಗುಡಿಸಲುಗಳಲ್ಲಿ ಪುನಃ ವಾಸಿಸಲು ಸಹ ಅನುಕೂಲವಾಗುತ್ತದೆ.

(೩) ಕಾಪು ಕ್ಷೇತ್ರದ ಕಟಪಾಡಿ ಮಂಡಳದ ಎಣಗುಡ್ಡೆ ಗ್ರಾಮದ ನದಿಗೆ ಉಪ್ಪು ನೀರಿನ ತಡೆಗೋಡೆ ನಿರ್ಮಿಸಲು ಒತ್ತಾಯ

ಶ್ರೀ ವಸಂತ ವಿ. ಸಾಲಿಯಾನ.— ಮಾನ್ಯ ಅಧ್ಯಕ್ಷರೇ, ಕಾಪು ಕ್ಷೇತ್ರದ ಕಟಪಾಡಿ ಮಂಡಳದ ಎಣಗುಡ್ಡೆ ಗ್ರಾಮದ ಕಂಬಳಕಟ್ಟು ಪ್ರದೇಶಕ್ಕೆ ನದಿಯ ಉಪ್ಪು ನೀರು ಒಳಕ್ಕೆ ಬಂದು ಆ ಪ್ರದೇಶದ ರೈತರ ಕೃಷಿ ಮತ್ತು ನೀರಿನ ಕೆರೆಗಳು ಉಪ್ಪು ನೀರಿನಿಂದ ಹಾಳಾಗಿವೆ. ಇದರಿಂದ ಆ ಪ್ರದೇಶದ ರೈತರು ಹಲವಾರು ವರ್ಷಗಳಿಂದ ಕಷ್ಟ ನಷ್ಟಕ್ಕೆ ಒಳಗಾಗಿದ್ದಾರೆ. ಅಲ್ಲಿ ಒಂದೇ ಬೆಳೆ ಬೆಳೆಯಲು ಆಗುತ್ತದೆ. ಆದುದರಿಂದ ಈ ಪ್ರದೇಶಕ್ಕೆ ಒಂದು ಉಪ್ಪು ನೀರು ತಡೆ ಅಣೆಕಟ್ಟನ್ನು ರಚಿಸಲು ನಾನಂ ೧೯೮೩ ರಿಂದ ಸರಕಾರದ ಗಮನಕ್ಕೆ ತಂದಿರುತ್ತೇನೆ. ಆದರೆ ಈ ತನಕ ಆ ಪ್ರದೇಶಕ್ಕೆ ಉಪ್ಪು ನೀರು ತಡೆಗೋಡೆಗೆ ಮಂಜೂರಾತಿ ಆಗಲಿಲ್ಲ. ಸರಕಾರವು ಈ ಗಂಭೀರವಾದ ವಿಚಾರವನ್ನು ಪರಿಶೀಲಿಸಿ ಕೂಡಲೇ ಅಲ್ಲಿಗೆ ಒಂದು ಉಪ್ಪು ನೀರು ತಡೆಗೊಡೆಯನ್ನು ಮಾಡಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆಯ ಸಚಿವರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

೪) ಕುಮಟಾ ತಾಲ್ಲೂಕಿನಲ್ಲಿರುವ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿರುವ ಶಿಕ್ಷಕರನ್ನು ಪರ್ಯಾಯಿಸಲು ಒತ್ತಾಯ.

ಶ್ರೀ ಆರ್. ಎನ್. ನಾಯಕ್.— ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನಲ್ಲಿರುವ ಸರಕಾರಿ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿರುವ ಶಿಕ್ಷಕರಲ್ಲಿ ಹೆಚ್ಚಿನ ಶಿಕ್ಷಕರು ೬–೭ ವರ್ಷಗಳಿಗಿಂತಲೂ ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಅವರೆಲ್ಲರೂ ಉತ್ತರ ಕನ್ನಡ ಜಿಲ್ಲೆಯ ಕುಮಟಾ